ಸಂಖ್ಯೆ:ಎ5/ಉಅಸಂ/ಬೆಂಗ್ರಾವಿ/ಸಿಆರ್–13/2019–20

ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ
ಬೆಂಗಳೂರು ಗ್ರಾಮಾಂತರ ವಿಭಾಗ
ಬೆಂಗಳೂರು ದಿನಾಂಕ: 16.08.2019

**ಅಧಿಕೃತ ಜ್ಞಾಪನಾ ಪತ್ರ**

ವಿಷಯ: ಹೊಸಕೋಟೆ ತಾಲ್ಲೂಕಿನ ತಿರುವರಂಗಪುರ ಗ್ರಾಮದ ಶ್ರೀ ಅಣ್ಣಯಪ್ಪ ಬಿನ್ ಲೇಟ್ ಮುನಿಶಾಮಪ್ಪ ರವರು ಕಾಡಾನೆ ದಾಳಿಯಿಂದ ಮೃತ್ತಪಟ್ಟಿದ್ದು ಮೃತರ ಪತ್ನಿಯಾದ ಶ್ರೀಮತಿ ವರಲಕ್ಷ್ಮಮ್ಮ ಇವರಿಗೆ ಪರಿಹಾರ ಧನ ಮಂಜೂರು ಮಾಡುವ ಬಗ್ಗೆ.

ಉಲ್ಲೇಖ

1. ವಲಯ ಅರಣ್ಯಾಧಿಕಾರಿ, ಹೊಸಕೋಟೆ ವಲಯ ಹೊಸಕೋಟೆ ಇವರ ಪತ್ರ ಸಂಖ್ಯೆ:ವಅಅ/ಹೊಕೋ/ವನ್ಯಜೀವಿ/ಸಿಆರ್ / /2019–20 ದಿನಾಂಕ 16.08.2019.
2. ಸರ್ಕಾರಿ ಆದೇಶ ಸಂಖ್ಯೆ:ಅಪಜೀ 143 ಎಫ್.ಡಬ್ಲ್ಯೂ.ಎಲ್ 2010 ಬೆಂಗಳೂರು ದಿನಾಂಕ 03.08.2011.
3.

*****

ವಲಯ ಅರಣ್ಯಾಧಿಕಾರಿ ಹೊಸಕೋಟೆ ವಲಯ ಹೊಸಕೋಟೆ ರವರ ಉಲ್ಲೇಖ (1)ರ ಪತ್ರದಲ್ಲಿ ಶ್ರೀ. ಅಣ್ಣಯಪ್ಪ ಬಿನ್ ಲೇಟ್ ಮುನಿಶಾಮಪ್ಪ ರವರು ದಿನಾಂಕ 14.08.2019 ರಂದು ಸುಮಾರು ಸಂಜೆ 4.00 ಘಂಟೆಗೆ ಅನುಗೊಂಡನಹಳ್ಳಿ ಹೋಬಳಿಯ ತಿರುವರಂಗಪುರ ಗ್ರಾಮದ ಬಳಿ ಕಾಣಿಸಿಕೊಂಡ ಎರಡು ಗಂಡು ಕಾಡಾನೆಗಳನ್ನು ನೋಡಲು ಹೋದಾಗ ಆನೆಗಳು ಅವರ ಮೇಲೆ ದಾಳಿ ನೆಡೆಸಿ ಸೊಂಡಿಲಿನಿಂದ ತಿರುಚಿ ಬಿಸಾಕಿದ್ದು, ಸದರಿಯವರು ಸ್ಥಳದಲ್ಲಿಯೇ ಮೃತ್ತಪಟ್ಟಿರುತ್ತಾರೆ ಎಂಬುದಾಗಿ ವರದಿ ನೀಡಿರುತ್ತಾರೆ. ಉಲ್ಲೇಖ (2) ರ ಸರ್ಕಾರಿ ಆದೇಶದನ್ವಯ, ಮೃತಪಟ್ಟವರ ವಾರಸುದಾರರಾದ ಶ್ರೀಮತಿ ವರಲಕ್ಷ್ಮಮ್ಮ ಕೋಂ ಲೇಟ್ ಅಣ್ಣಯಪ್ಪ ಇವರಿಗೆ ರೂ.5.00 ಲಕ್ಷಗಳ ಧಯಾತ್ಮಕ ಧನವನ್ನು ಪಾವತಿ ಮಾಡಬೇಕಾಗಿದ್ದು, ಪೂರ್ವನ್ವಯವಾಗಿ ರೂ.2.00 ಲಕ್ಷಗಳನ್ನು ತುರ್ತಾಗಿ ಮಂಜೂರು ಮಾಡಲು ಈ ಕೆಳಕಂಡ ಆದೇಶ.

**ಆದೇಶ**

ಮೇಲೆ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಶ್ರೀ ಅಣ್ಣಯಪ್ಪ ಬಿನ್ ಲೇಟ್ ಮುನಿಶಾಮಪ್ಪ ತಿರುವರಂಗ ಗ್ರಾಮ, ಅನುಗೊಂಡನಹಳ್ಳಿ ಹೋಬಳಿ, ಹೊಸಕೋಟೆ ತಾಲ್ಲೂಕು ಎಂಬುವರು ದಿನಾಂಕ 14.08.2019 ರಂದು ಕಾಡಾನೆ ದಾಳಿಯಿಂದ ಮರಣ ಹೊಂದಿರುವುದರಿಂದ ಉಲ್ಲೇಖ(2) ರ ಸರ್ಕಾರಿ ಆದೇಶದಲ್ಲಿ ತಿಳಿಸಿರುವ ಅಂಶಗಳಂತೆ ಮೃತರ ವಾರಸುದಾರರದ ಶ್ರೀಮತಿ ವರಲಕ್ಷ್ಮಮ್ಮ ರವರಿಗೆ ತಕ್ಷಣದ ಧಯಾತ್ಮಕ ಧನವಾಗಿ ರೂ.2.00 ಲಕ್ಷಗಳ (ಎರಡು ಲಕ್ಷಗಳು) ಪರಿಹಾರ ಧನವನ್ನು ಮಂಜೂರು ಮಾಡಿ ಆದೇಶಿಸಲಾಗಿದೆ.

ಸದರಿ ವೆಚ್ಚವನ್ನು 2019–20ನೇ ಸಾಲಿಗೆ 2406–02–110–0–01 ಪಾಕೃತಿ ವನ್ಯಜೀವಿ ಸಂರಕ್ಷಣೆ 015 ಪೂರಕ ವೆಚ್ಚಗಳು (ಪುರಸ್ಕೃತ) ಲೆಕ್ಕ ಶೀರ್ಷಿಕೆಯಡಿ ಭರಿಸಬಹುದಾಗಿದೆ.

ಉಪ ಅರಣ್ಯ ಸಂರಕ್ಷಣಾಧಿಕಾರಿ,
ಬೆಂಗಳೂರು ಗ್ರಾಮಾಂತರ ವಿಭಾಗ,
ದೇವನಹಳ್ಳಿ.

\ಪ್ರತಿಯನ್ನು:–

1. ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಬೆಂಗಳೂರು ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
2. ಮಹಾಲೇಖಪಾಲಕರು, ಕರ್ನಾಟಕ ಬೆಂಗಳೂರು ರವರಿಗೆ ಸಲ್ಲಿಸಿದೆ.
3. ಉಪ ಖಜನಾಧಿಕಾರಿಗಳು, ಹೊಸಕೋಟೆ ರವರಿಗೆ ಮಾಹಿತಿಗಾಗಿ ಕಳುಹಿಸಿದೆ.
4. ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ದೊಡ್ಡಬಳ್ಳಾಪುರ ಉಪ ವಿಭಾಗ ದೊಡ್ಡಬಳ್ಳಾಪುರ ರವರಿಗೆ ಮಾಹಿತಿಗಾಗಿ ಕಳುಹಿಸಿದೆ.
5. ವಲಯ ಅರಣ್ಯಾಧಿಕಾರಿ ಹೊಸಕೋಟೆ ವಲಯ ರವರಿಗೆ ಮಾಹಿತಿಗಾಗಿ ಮತ್ತು ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.
6. ಹೆಚ್ಚಿನ ಪ್ರತಿ